ಅಮರಯ್ಯ, ಶೋರಾಪುರ
ನೀರೆಗೂ, ಸೀರೆಗೂ ಎಂಥಾ ಅನುಬಂಧ?



ಪಡ್ಡೆ ಹುಡುಗರು ನೀರೆ ಬರುತ್ತಿದ್ದಂತೆಯೇ see ರೇ ಎನ್ನುತ್ತಾ, ಬಾಯಿ ಬಾಯಿ ಬಿಡುವಂತಹದು.

ಎ.ಎಸ್.ಸ್ವಾಮಿ, ಶೋರಾಪುರ
ಜೀವನದಲ್ಲಿ ಯಶಸ್ಸು ಸಾಧಿಸಲು ಗುಟ್ಟು ಯಾವುದು?
ಗುಟ್ಟು ರಟ್ಟಾಗಿಸದಿರುವುದೇ ಗುಟ್ಟು!

ರಮೇಶ್, ಹನುಮನಾಳು
ಸತ್ತ ಮೇಲೆ ಮಣ್ಣಿಗೆ ಹೋಗುವ ದೇಹ ಎನ್ನುತ್ತಾರೆ; ಬದುಕಿರುವಾಗ ಮಣ್ಣಿನ ಮೇಲೆ ಕೂಡಲು ಹಿಂಜರಿತವೇಕೆ?
ಸರಿಹೋಯ್ತು! ಸತ್ತ ಮೇಲೆ ಸುಡುವುದೂ ಉಂಟೆಂದು ಈಗ ಸ್ಯಾಂಪಲ್‌ಗೆಂದು ಸುಡಿಸಿಕೊಳ್ಳಲಾದೀತೇ...!

ಕೆ.ಎನ್.ನಾರಾಯಣರೆಡ್ಡಿ, ಕೆ.ಜಿ.ಎಫ್.
ಇತ್ತೀಚೆಗೆ ತರುಣಿಯರು ಜಡೆ ಹಾಕುವುದನ್ನೇ ಬಿಟ್ಟಿದ್ದಾರಲ್ಲಾ; ಕಾರಣವೇನು?



ಒಂದೇ, ಏಕೈಕವಾದ, ಅದ್ವಿತೀಯವಾದ ಕಾರಣ ಕೂದಲೇ ಇಲ್ಲ!

ಎಂ.ಜಿ.ನೇಹವರ್ಷಿಣಿ, ಬಳ್ಳಾರಿ
ಕಾಗೆಯ ಜಗಳಕ್ಕೂ, ರಾಜಕೀಯ ಜಗಳಕ್ಕೂ ಏನು ವ್ಯತ್ಯಾಸ?
ಕಾಗೆಯ ಜಗಳ ಕಾಗೆಗಳಿಗೆ ಮಾತ್ರ ಸೀಮಿತ; ರಾಜಕೀಯ ಜಗಳದಲ್ಲಿ ಗೂಬೆಗಳೂ ಇರುತ್ತವೆ.

ಬಸವರಾಜ ಹೊನಖಾಂಡೆ, ಅಥಣಿ
ನಿಮ್ಮೂರ ಕಾಳಸಂತೆಯಲ್ಲಿ ನ್ಯಾಯ, ನೀತಿ, ಧರ್ಮ ಸಿಕ್ಕರೆ ನಮ್ಮಲ್ಲಿಗೆ ಕಳುಹಿಸುವಿರಾ?
ಸಾಧ್ಯವಿಲ್ಲ. ಅವೆಲ್ಲಾ ಇದ್ದರೆ ನಿಮ್ಮ ಚೆಕ್‌ಪೋಸ್ಟ್, ಕಸ್ಟಮ್ಸ್‌ನವರು ವಾಹನವನ್ನು ಒಳಗೇ ಬಿಡುವುದಿಲ್ಲವಂತೆ!

ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ
ದೂರದರ್ಶನದಲ್ಲಿ ಭವಿಷ್ಯ ಹೇಳುವವರೆಲ್ಲಾ ಹೆಚ್ಚಾಗಿ ಚಿನ್ನದ ಆಭರಣಗಳನ್ನೇ ಧರಿಸುವ ಉದ್ದೇಶವೇನು?
ಇತರರ ಭವಿಷ್ಯ ನುಡಿಯುವುದು ತಮಗೆ ಚಿನ್ನದಂತಹ ವ್ಯಾಪಾರವಾಗಿದೆ ಎಂದು ಸೂಚಿಸಲು!

ಕುಬೇರಪ್ಪ ಎಂ. ವಿಭೂತಿ, ಹರಿಹರ
ಪುರುಷಧರ್ಮ ಇಲ್ಲದವರನ್ನು ಪುರುಷೋತ್ತಮ ಎಂದು ಕರೆಯಲು ಸಾಧ್ಯವೆ?
ಏನೇನೂ ಅಲ್ಲದವರನ್ನು ಪ್ರಧಾನಿ ಎಂದಿಲ್ಲವೇ... ಹಾಗೆಯೇ ಇದೂ ಸಾಧ್ಯ!

ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ
ಎಷ್ಟೋ ಸತ್ಯಗಳು ಬಹಿರಂಗವಾಗುವುದೇ ಇಲ್ಲವಲ್ಲಾ, ಯಾಕೆ?
ಬಹಿರಂಗವಾಗದ ಕೆಲವು ಸತ್ಯಗಳೇ ಅಂತರಂಗವನ್ನು ಶುದ್ಧಿಗೊಳಿಸುವ ಸಾಬೂನುಗಳು!

ರವೀಂದ್ರನಾಥ ಶಿ. ಯಡಹಳ್ಳಿ, ಹುನಗುಂದ
ಗುರು! ಮಳೆರಾಯನ ಆರ್ಭಟಕ್ಕೆ ಪ್ರಳಯ; ರಾಜಕಾರಣಿಗಳ ಆರ್ಭಟಕ್ಕೆ...?
ಕಂತೆ ಕಂತೆ ವಿನಿಮಯ!

ಶಿವಮೊಗ್ಗ ರಮೇಶ್, ಮೈಸೂರು
ಅತ್ಯಾಚಾರಿ, ಕಾಮಿ ಸ್ವಾಮಿಗಳಿಗೂ ಮಂತ್ರಿಗಳು ಸಾಷ್ಟಾಂಗ ನಮಸ್ಕಾರ ಹಾಕುತ್ತಿದ್ದಾರಲ್ಲ?
ಕಾರ್ಯವಾಸಿ ಕತ್ತೆ ಕಾಲು ಕಟ್ಟು ಅಲ್ಲವೇ...!

ಜೆ.ಆರ್.ಆದಿನಾರಾಯಣ, ಬೆಂಗಳೂರು
ಮದುವೆಗೆ ಮುಂಚಿನ ಸಂಭಾಷಣೆ ಚೆನ್ನವೋ, ನಂತರದ್ದೋ?
ಮುಂಚಿನದ್ದೇ...! ಅಲ್ಲಿ ಕನಸುಗಳಿರುತ್ತವೆ; ನಂತರದ್ದು ಬರೀ ವಾಸ್ತವ.

ಗಾಯತ್ರಿ, ರಾಜಾಜಿನಗರ
ಅವರೂ ಮನುಷ್ಯರೇ, ನಾವೂ ಮನುಷ್ಯರೇ ಆದರೂ ರಾಘವಾಂಕ, ಕನಕ, ಪುರಂದರ, ಲಕ್ಷ್ಮೀಶರಂತಹ ಶ್ರೇಷ್ಠರಂತೆ ನಮಗೆ ಕಾವ್ಯ ರಚಿಸಲು ಏಕೆ ಸಾಧ್ಯವಿಲ್ಲ?
ಛಂದದ ಚಂದ ಸಿಗದೆ ನೊಂದು, ಬೆಂದು, ಪ್ರಾಸವೇ ತ್ರಾಸವೆಂದು ಕೈಚೆಲ್ಲುವುದರಿಂದ!

## ಬಹುಮಾನಿತ ಪ್ರಶ್ನೆ

ಎಂ.ಬಿ. ಖೋದಾನಪುರ, ಸವದತ್ತಿ
ಮನುಜರನ್ನು ಕಾಡುವ ಶನಿಯು ದೇವತೆಗಳನ್ನು ಏಕೆ ಕಾಡುವುದಿಲ್ಲ?
ಸ್ವಜಾತಿ ಪ್ರೇಮ!

ಸುಧಾ ವಿ. ಬೆಂಗಳೂರು
ಭಯೋತ್ಪಾದಕರಿಗೂ, ಕೈಕೊಡುವ ಗಂಡಸರಿಗೂ ವ್ಯತ್ಯಾಸವಿದೆಯೆ?
ಭಯೋತ್ಪದಕರೇ ವಾಸಿ; ತಮ್ಮ ತಪ್ಪಿನ ಜವಾಬ್ದಾರಿಯನ್ನು ತಾವೇ ಹೊರುತ್ತಾರೆ.

ಆರ್.ಕೃಷ್ಣಮೂರ್ತಿ, ಮಂಡ್ಯ
ಮಹಾಭಾರತದ ಕಥೆ ಓದಿದ್ದರೂ ಸಹ ನೀವು ಅಣ್ಣ ತಮ್ಮಂದಿರ ಹಾಗೆ ಬಾಳಿ ಎನ್ನುವರಲ್ಲಾ...?
ಸರಿಯೇ. ಅಣ್ಣತಮ್ಮಂದಿರ ಮಕ್ಕಳ ಹಾಗೆ ಬಾಳಿ ಎಂದಿದ್ದರೆ ತಪ್ಪಾಗುತ್ತಿತ್ತು.

ಅಭಿಷೇಕ್ ಆರ್. ರೆಡ್ಡಿ, ಗೌರಿಬಿದನೂರು
ಕವಿಗಳಿಗೂ, ಕಪಿಗಳಿಗೂ ಏನು ವ್ಯತ್ಯಾಸ ಅಂಕಲ್/ಆಂಟಿ?
ಕಪಿಗಳಿಗೆ ಉದರಪೋಷಣೆ ಮುಖ್ಯ, ಕವಿಗಳಿಗೆ ಆದರ, ಪೋಷಣೆ ಮುಖ್ಯ.

ರಾಮಕೃಷ್ಣರೆಡ್ಡಿ, ಕಲ್ಲಿನಾಯಕನಹಳ್ಳಿ
ಗಂಡಿಗೂ, ಹೆಣ್ಣಿಗೂ ಇರುವ ವ್ಯತ್ಯಾಸವೇನು?



ಉತ್ತರಕ್ಕೆ ಆರನೆಯ ತರಗತಿಯ ಬಯಾಲಜಿ ಪುಸ್ತಕ ಓದಿ!

ಗೀತಾ ಬರ್ಲ, ಬೆಂಗಳೂರು
ಹಗೆಗೂ, ಹೊಗೆಗೂ ಇರುವ ವ್ಯತ್ಯಾಸವೇನು?
ಹೊಗೆ ಚಂಚಲ, ಹಗೆ ನಿಶ್ಚಲ; ಹೊಗೆ ಸಾಗಿಸಲಾಗುತ್ತದೆ, ಹಗೆ ಸಾಧಿಸಲಾಗುತ್ತದೆ.

ಕೆ.ಮೈಥಿಲಿಕೃಷ್ಣ, ಬೆಂಗಳೂರು
ಉಡಾಫೆ ಎಂದರೇನು? ಒಂದು ಉದಾಹರಣೆ ಪ್ಲೀಸ್.
ಉಡಾಫೆ ಎಂದರೆ ಅಸಡ್ಡೆ; ಬ್ರಂಹಾಂಡದಂತಹ ಜ್ಯೋತಿಷಿಗಳು ಜನರ ಬಗ್ಗೆ ಇರಿಸಿಕೊಂಡಿರುವಂತಹ ಧೋರಣೆ.

ನ.ಮುನಿಯಪ್ಪ, ಮಳ್ಳೂರು
ವಿಧಾನಸೌಧದಲ್ಲಿ ಕಿತ್ತಾಡುವ ಜನಕ್ಕೂ, ಬೀದಿಯಲ್ಲಿ ಕಿತ್ತಾಡುವ ಜನಕ್ಕೂ ಏನಾದರೂ ವ್ಯತ್ಯಾಸವಿದೆಯೆ ಗುರು?
ಬೀದಿ ಜಗಳದಲ್ಲಿ ಹಲ್ಲು, ಮೂಳೆ ಬ್ರೇಕ್ ಆಗುತ್ತವೆ; ವಿಧಾನಸೌಧದ್ದು ಬ್ರೇಕಿಂಗ್ ನ್ಯೂಸ್ ಆಗುತ್ತದೆ.

■ ರಾಮ್